ಎಂ.ಜಿ. ಚನ್ನಪ್ಪಸ್ವಾಮಿ, ಭದ್ರಾವತಿ

*ಕುಕ್ಕರ್ ಶೀಟಿ ಹೊಡೆಯುವುದಕ್ಕೂ, ಕಾಲೇಜ್ ಹುಡುಗರು ಶೀಟಿ ಹೊಡೆಯುವುದಕ್ಕೂ ಏನು ವ್ಯತ್ಯಾಸ?*



ಒಂದು ಥಾಲಿಯ ಪ್ಲೇಟ್ ಹಿಡಿಯಲಿಕ್ಕೆ ದಾರಿ; ಇನ್ನೊಂದು ಠಾಣೆಯ ಸ್ಲೇಟ್ ಹಿಡಿಯಲಿಕ್ಕೆ ದಾರಿ!

ಶೋಭಾ ಎಂ.ಆರ್. ಮರ್ಕುಲಿ

*ತಮಗೆ ಹೆಣ್ಣುಮಗು ಜನಿಸಿದರೆ ದರಿದ್ರ ಎನ್ನುತ್ತಾ ಬೇಸರಿಸುವ ಜನ ಹೆಣ್ಣುಕರು ಜನಿಸಿದರೆ ಸಂತೋಷಪಡುವರಲ್ಲಾ...?*

ಇವರು ಮುದು–ಕರು ಆದಾಗಲೂ ಆ ಕರುವಿನ ಕರುವಿನ ಕರು ಜೊತೆಗಿರುತ್ತದೆ; ಮಗಳು ಇರುವುದಿಲ್ಲವಲ್ಲ!

ಚಿಕ್ಕೋಬನಹಳ್ಳಿ ಚಾಂದ್‌ಬಾಷ, ಚಿತ್ರದುರ್ಗ

*ಎಲ್ಲ ಭ್ರಷ್ಟಾಚಾರಗಳ ಬೇರು ಹಣವಾದರೆ ಅದರ ಬೀಜ ಯಾವುದು?*

ಅತೃಪ್ತಿ.

ಪಿ.ಎಸ್. ಶ್ರೀವತ್ಸ, ಬೆಂಗಳೂರು

*ಕೊಳವೆ ಬಾವಿ; ಇದರ ನಿಜವಾದ ಅರ್ಥ?*



ಚಿಮ್ಮಿದರೆ ನೀರು, ಸಿಲುಕಿದರೆ ಕಣ್ಣೀರು.

ಡಾ. ಅನಿಕೇತ್ ಶರ್ಮಾ, ಬೆಂಗಳೂರು

*ಹತ್ತು ಭಾಷೆಗಳಲ್ಲಿ ಪಾಂಡಿತ್ಯವಿದ್ದರೂ ಇಂಗ್ಲಿಷ್ ಭಾಷೆ ಬರದಿದ್ದರೆ ಬದುಕು ಶೂನ್ಯ?*

ಜರ್ಮನಿ, ರಷ್ಯಾ, ಇಟಲಿ, ಫ್ರಾನ್ಸ್, ಸ್ಪೇಯ್ನ್, ಚೀನಾ, ಜಪಾನ್, ತಮಿಳುನಾಡು.... ಇವು ಯಾವುವೂ ಈ ಮಾತನ್ನು ಒಪ್ಪುವುದಿಲ್ಲವಂತೆ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಪ್ರಧಾನಿಗಳೇ ಮುಕ್ತವಾಗಿ ನಿಂತು ಭಾಷಣ ಮಾಡಿರುವಾಗ ನಮ್ಮ ಮುಖ್ಯಮಂತ್ರಿಗಳು ಗಾಜಿನ ರಕ್ಷಾ ಪರದೆಯ ಹಿಂದೇಕೆ ನಿಂತುಕೊಂಡರು?*

ಅದು ಅವರವರ ಭಾಷಣದ ಪ್ರತೀಕವಂತೆ; ಮುಖ್ಯಮಂತ್ರಿಗಳದು ಗಾಜಿನಷ್ಟೇ ನಯವಾದ ನುಡಿ, ಪ್ರಧಾನಿಗಳದು **outstanding**!

ಸಿಹಿಮೊಗೆ ರಮೇಶ್, ಮೈಸೂರು

*ಹುತ್ತಕ್ಕೆ ಹಾಲೆರೆಯುವುದರ ಬದಲು ಅದೇ ಹಾಲನ್ನು ಬಡ ಮಕ್ಕಳಿಗೆ ಕೊಟ್ಟರೆ ಇದಕ್ಕಿಂತ ಪುಣ್ಯದ ಕೆಲಸ ಯಾವುದಿದೆ?*

ನಿಜ. ಆದರೆ ದಯೆಗಿಂತ ಭಯವೇ ಪ್ರಧಾನವಾದಾಗ ಹಸುಳೆಗಿಂತ ಹಾವೇ ಶ್ರೇಷ್ಠವಾಗುವುದಂತೆ!

ವಿ.ಹೇಮಂತಕುಮಾರ್, ಬೆಂಗಳೂರು

*ಭೂಮಿಯ ಸುತ್ತ ತಿರುಗುವ ಚಂದ್ರನಿಗೂ, ಹೆಣ್ಣಿನ ಹಿಂದೆ ಸುತ್ತುವ ಗಂಡಿಗೂ ವ್ಯತ್ಯಾಸವೇನು?*

ಚಂದ್ರನದು ಮಾಸಮಾಸಕ್ಕೂ ಮಾಸದ ಚಲನೆ; ಗಂಡಿನದು ಮಾಸಮಾಸಕ್ಕೆ ಮಾಸುವ ಚಲನೆ.

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಸೂರ್ಯನ ಉದಯ ಕಾರಣಾಂತರಗಳಿಂದ ತಡವಾದರೆ ಏನು ಮಾಡುತ್ತೀರಿ?*

ಇನ್ನಷ್ಟು ಹೊತ್ತು, ಮತ್ತಷ್ಟು ಹೊದ್ದು, ರಸನಿದ್ರೆ!

ಎಚ್.ಜಿ. ಜಗದೀಶ್, ಮೈಸೂರು

*ನಮ್ಮ ದೇಶದಲ್ಲಿ ಮಹಾತ್ಮಾ ಗಾಂಧಿ ರಸ್ತೆಯಲ್ಲಿಯೇ ಬಾರ್‌ಗಳು ಹೆಚ್ಚಾಗಿರಲು ಕಾರಣವೇನು?*

ಗಾಂಧೀಜೀ ಬ್ಯಾರಿಸ್ಟರ್ ಎಂದು ಹೇಳಿದುದನ್ನು ಬಾರ್ ಇಷ್ಟ ಪಡುವವರು ಎಂದು ತಪ್ಪಾಗಿ ಕೇಳಿಸಿಕೊಂಡಿರುವರಂತೆ!

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

*ನಿಜಕ್ಕೂ 'ಹೇಳಿ ಮಾಡಿಸಿದ ಜೋಡಿ' ಹೇಗಿರುತ್ತದೆ?*

ಸ್ಪರ್ಧೆಯಲ್ಲಿ ಪ್ರೈಝ್ ಪಡೆದು, ಮನೆಯಲ್ಲಿ ಕಚ್ಚಾಡುವ 'ಆದರ್ಶ ದಂಪತಿ'ಗಳಂತೆ!

ಸಿದ್ದಾರ್ಥ ಹೆಬ್ಬಾರ್, ಈದು

*ಬದುಕಿನ ನಾಟಕದಲ್ಲಿ ಸೂತ್ರಧಾರ ಯಾರು?*

ಆಕೆಯೇ; ಧಾರೆ ಆದ ಮರುಕ್ಷಣ ನಿಮ್ಮ ಸೂತ್ರ ಅವಳ ಕೈಯಲ್ಲಿ!

## ಬಹುಮಾನಿತ ಪ್ರಶ್ನೆ

ಆರ್. ಮಧುಸೂದನ್, ಹಾಸನ

*ವಿಜ್ಞಾನಿಗಳು ಕೂಡ ಹೆಂಡತಿಗೆ ಹೆದರುತ್ತಾರಂತೆ...?*

ಅರ್ಥವಾಗದುದರ ಬಗ್ಗೆ ಆತಂಕ, ಭಯ ಇರುವುದು ಸಹಜ!

ಹೆಸರಿಲ್ಲ, ಊರಿಲ್ಲ

*ನಾನು ಬಾಬಾ ಗಿಳಿಯೆ ಬಣ್ಣದ ಗಿಳಿಯೆ ಹೇಳಿಕೊಟ್ಟರೆ ಮಗ ಬಾಬಾ ಬ್ಲಾಕ್‌ಶೀಪ್ ಹಾಡುತ್ತಾನಲ್ಲಾ, ಮುಂದೆ ಕನ್ನಡದ ಗತಿ?*

ಆಂಗ್ಲದಲ್ಲೇ ಕವನ ಆರಂಭಿಸಿದ ಕುವೆಂಪು ಬ್ರ್ಯಾಂಡ್ ಇರಬಹುದು; ಆ ಮಾತು ಅಂತಿರಲಿ, ಬಾಬಾಗಳು ಬ್ಲಾಕ್‌ಶೀಪ್‌ಗಳೆಂಬ ಅರಿವು ಈಗಲೇ ಇರುವ ನಿಮ್ಮ ಸುಪುತ್ರನಿಗೆ ಹ್ಯಾಟ್ಸ್ ಆಫ್!

ಎಂ.ಎಸ್. ಸೋಮಶೇಖರ್, ಮೈಸೂರು

*ಗಂಡಸರಿಗೆ ಮಾತ್ರ ತಲೆಯ ಮೇಲೆ ಎರಡು ಕೋಡುಗಳಿದ್ದಿದ್ದರೆ...?*



ತರಕಾರಿಗೊಂದು, ದಿನಸಿಗೊಂದು ಚೀಲವನ್ನು ನೇತುಹಾಕಿ ಕಳುಹಿಸಲು ಹೆಂಗಸರಿಗೆ ಅನುಕೂಲವಾಗುತ್ತಿತ್ತು!

ಎಸ್.ಜಿ. ಕರನಂದಿ, ಹುನಗುಂದ

*ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧಿಸಿದಂತೆ ನಿದ್ರೆಯನ್ನೂ ನಿಷೇಧಿಸಿದರೆ ಹೇಗೆ?*

ಅಷ್ಟೊಂದು ಕಟುಕರಾಗಬೇಡಿ; ಪಾಠ, ಭಾಷಣ, ಉಪದೇಶ, ಸಂಗೀತಗಳನ್ನು ಕೇಳುವವರ ಮೇಲೆ ಕೊಂಚ ದಯೆ ಇರಲಿ.

ಎಂ.ಎಸ್. ಧರ್ಮೇಂದ್ರ, ಜಿ.ಟಿ.ಆರ್.ಇ. ಕ್ಯಾಂಪಸ್

*ಡೇಟಿಂಗ್‌ಗೂ, ಡಯಟಿಂಗ್‌ಗೂ ಏನು ವ್ಯತ್ಯಾಸ?*

ದೇಹ ಕೃಶವಾಗಲು ಡಯಟಿಂಗ್, ಪರ್ಸ್ ಕೃಶವಾಗಲು ಡೇಟಿಂಗ್!

■ ರಾಮ್